ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿಸಿ ಸಂಃ **3741/2022**

| | | |
|---|---|---|
| ಸಾಕ್ಷಿಯ ಹೆಸರುಃ | ಸತೀಶ | ಫ್ರಾಸಾಃಃ 2 |
| ತಂದೆ ಹೆಸರುಃ | ಕಾಳೇಗೌಡ | ಚಾಸಾಃಃ 6 |
| ವಯಸ್ಸುಃ | 37 ವರ್ಷ | ಪ್ರಮಾಣೀಕರಿಸಿದ ದಿಃ 23.07.2025. |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ನವಿಲೂರು ಗ್ರಾಮ, | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ಸಾಕ್ಷಿಯು ಮಹಜರ್ ಹಾಗೂ ಕಚ್ಚಾ ನಕಾಶೆಯಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುಸಿರುತ್ತಾರೆ. ಮಹಜರನ್ನು ನಿಪಿ - 2 ಎಂದು ಹಾಗೂ ಕಚ್ಚಾ ನಕಾಶೆಯನ್ನು ನಿಪಿ - 3 ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ - 2(ಎ) ಮತ್ತು 3(ಎ) ಎಂದು ಗುರುತಿಲಾಯಿತು. ನಿಪಿ - 2 ಮತ್ತು 3 ಕ್ಕೆ ನಾನು ಈಗ್ಗೆ 2-3 ವರ್ಷದ ಹಿಂದೆ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ಕಚ್ಚಾ ನಕಾಶೆ ತಯಾರಿಸಿರುವುದಿಲ್ಲ ಹಾಗೂ ಯಾವುದೇ ವಾಹನಗಳನ್ನು ಅಮಾನತುಪಡಿಸಿಕೊಂಡಿಲ್ಲ. ನಿಪಿ - 2 ಮತ್ತು 3 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

1. ದಿಃ 26.04.2022 ರಂದು ಪೊಲೀಸರು ಪಿರಿಯಾಪಟ್ಟಣ ಟೌನ್ ಉಪ್ಪಾರಗೇರಿಯಿಂದ ಸ್ವಲ್ಪ ಮುಂದೆ ಇರುವ ವಿರುಪಾಕ್ಷ ರವರ ತೋಟಕ್ಕೆ ಹೊಂದಿಕೊಂತೆ ಇರುವ ಮಲಬಾರ್ ಕೆಫೆ ಹೊಟೇಲ್ ಮುಂದೆ ಬಿ.ಎಂ ರಸ್ತೆಯಲ್ಲಿ ಬಂದಾಗ, ಚಾಸಾ-2 ರವರು ತೋರಿಸಿಕೊಟ್ಟ ಸ್ಥಳದಲ್ಲಿ ಪೊಲೀಸು ನನ್ನ ಮತ್ತು ಚಾಸಾ - 6 ರವರ ಸಮಕ್ಷಮ ಈಗ ಓದಿ ಹೇಳಿದ ನಿಪಿ - 2 ರಂತೆ ಸಂಜೆ 5-30 ರಿಂದ 6-30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿ ಕೆಎ.11.ಎಂ.3749 ರ ಮಾರುತಿ ಅಲ್ಟೋ ಕಾರನ್ನು ಹಾಗೂ ಕೆಎ.03.ಹೆಚ್.ಇ.369 ರ ಹೊಂಡಾ ಬೈಕನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿಪಿ - 3 ರಂತೆ ಕಚ್ಚಾ

ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ - 2 ಮತ್ತು 3 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಇಲ್ಲ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ